# 11. ಹಲಗಲಿ ಬೇಡರು (ಜನಪದ ಲಾವಣಿ)

**– ಜನಪದರು**

## ಪದ್ಯದ ಆಶಯ ಭಾವ

ಕನ್ನಡ ನಾಡಿನ ಮೇಲೆ ಪರಗಡಿಗಳಿಂದ ದಾಳಿ–ದಂಗೆ ನಡೆಯುತ್ತಿದ್ದವು. ವೀರರು ಅವುಗಳನ್ನು ತಡೆದು ಕನ್ನಡಿಗರ ಗೌರವವನ್ನು ಉಳಿಸಿದ್ದಾರೆ. ತ್ಯಾಗ, ಬಲಿದಾನಗಳಿಂದ ಅಮರರಾಗಿದ್ದಾರೆ. ಇಂತಹ ವೀರಕಲಿಗಳ ವೀರಸಾಹಸ, ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳೇ ಲಾವಣಿಗಳು. ಜನತೆಯನ್ನು ಹುರಿದುಂಬಿಸಲು ಗೀತೆಗಳನ್ನು ಕಟ್ಟಿಹಾಡಿದ್ದಾರೆ. ಊರುಗಳನ್ನೇ ಅವರಿಗೆ ಅಂಕಿತಗೊಳಿಸಿದ್ದಾರೆ. ಹಲಗಲಿಯ ಬೇಡರ ಲಾವಣಿ ಅದಕ್ಕೊಂದು ನೈಜ ನಿದರ್ಶನ. ಹಲಗಲಿಯು ಬೇಡರ ಊರು. ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ. ಅಂದು ಕಲಾದಗಿಯು ಜಿಲ್ಲೆಯ ಸ್ಥಾನ ಹೊಂದಿತ್ತು. **'ಹಲಗಲಿಯ ಬಂಟರ ಹತಾರ ಕದನ'** ಎಂಬ ವೀರ ರಸಯುಕ್ತವಾದ ಹಾಡುಗಳೇ ಹಲಗಲಿ ಬೇಡರ ಲಾವಣಿಗಳು. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಬ್ರಿಟಿಷರು ಆಡಳಿತ ಸೂತ್ರ ಹಿಡಿದರು. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು. ಈ ಹುಕುಮನ್ನು ವಿರೋಧಿಸಿ ಅಲ್ಲಲ್ಲಿ ದಂಗೆಗಳಾದವು. **ಹಲಗಲಿಯ ರಾಮ, ಬಾಲ, ಹನುಮ, ಜಡಗ** ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎಬ್ಬಿಸಿ ಹೆಬಲಕ್ ಎಂಬ ಅಧಿಕಾರಿಯನ್ನು ಕೊಲೆಗೈದರು. ಇದರಿಂದ ಕ್ರೋಧಗೊಂಡ ಕಾರಸಾಹೇಬ ಕಲಾದಗಿಯಿಂದ ದಂಡು ಕಳುಹಿಸಿ ಹಲಗಲಿಯನ್ನು ಮುತ್ತಿ ದಂಗೆ ಎದ್ದವರನ್ನು ಬಗ್ಗುಬಡಿದನು. ಕಂಪನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥಾನಕವೇ ಈ ಲಾವಣಿ. ಆ ಸಂದರ್ಭದಲ್ಲಿ ಅನಕ್ಷರಸ್ಥ ಸಮುದಾಯದಲ್ಲಿದ್ದ ಸ್ವಾತಂತ್ರ್ಯಪ್ರೇಮವನ್ನು ಪರಿಚಯಿಸುವುದು ಮತ್ತು ದೇಶ ಪ್ರೇಮವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು ಇಲ್ಲಿನ ಆಶಯ. ಈ ಲಾವಣಿಯನ್ನು **ಡಾ॥ ಬಿ.ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **ಕನ್ನಡ ಜನಪದ ಗೀತೆಗಳು** ಕೃತಿಯಿಂದ ಆಯ್ದು ಸಂಪಾದಿಸಿ ನೀಡಲಾಗಿದೆ.

## ಪದ್ಯದ ಸಾರಾಂಶ ವಿವರಣೆ

**ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ**
**ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ ದಡಕ ॥ ಪ ॥**

**ಸಾರಾಂಶ**

ಕತ್ತಿ ಹಿಡಿದು ಹೋರಾಡುವ ಸಿಟ್ಟಿನ ಜನ ಹಲಗಲಿಯ ಬೇಡರಿಗೆ ಹೋರಾಡುವ ಸಮಯ ಬಂದಿತು. ಇಂತಹ ಹಲಗಲಿಯ ವೀರರು ಹೋರಾಡಿದರೂ ಅವರು ತಮ್ಮ ಗುರಿಯನ್ನು ಮುಟ್ಟಲು ಸಾಧ್ಯವಾಗಲಿಲ್ಲ.

**ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ**
**ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ**
**ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ**
**ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗ ರಾಮ ಮಸಲತ್ತ**
**ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ**
**ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ**
**ಹೊಡಿರಿ ಜಗಳ ಕೂಡಿ ತೀರ್ತೇವು ಕುಮಕಿ ನಮ್ಮದ್ಯಾವತ್ತ**
**ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ.**
**ಕಾರಕೂನನ ಕಪಾಳಕ ಬಡಿದರ ಸಿಪಾಯಿ ನೆಲಕಬಿತ್ತ**
**ಆಗಿಂದಾಗ ದು:ಖದ ಸುದ್ದಿ ಸಾಹೇಬಗ ಹೋಯ್ತ ॥ 1 ॥**




**ಸಾರಾಂಶ:** ಬ್ರಿಟಿಷ್ ಸರ್ಕಾರ (ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ) ವಿಲಾಯಿತಿಯಿಂದ (ವಿದೇಶ) ಎಲ್ಲಾ ಜನರಿಗೆ ಜೋರ(ದಬ್ಬಾಳಿಕೆ)ಮಾಡಿ ಆಯುಧಗಳನ್ನೆಲ್ಲ ಕಸಿದು ಕೊಳ್ಳಿರಿ ಎಂದು ಆದೇಶವನ್ನು ಕಳಿಸಿತು. ಮುಧೋಳದ ಹತ್ತಿರ ಇರುವ ಹಲಗರಹಳ್ಳಿ (ಹಲಗಲಿ) ಜನ ಇದರ ವಿರುದ್ಧ ಹೋರಾಡಿ ಸುತ್ತ–ಮುತ್ತ ಪ್ರಸಿದ್ಧಿಯಾಗುವಂತೆ ಮೆರೆಯಿತು. ಹಲಗಲಿಯ **ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ** ಎಂಬ ನಾಲ್ಕು ಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯುಧಗಳನ್ನು ಸತಾಯಿಸಿದರೂ ಕೊಡಬಾರದು. ಆಯುಧಗಳು ಹೋದರೆ (ನಮ್ಮ ಅನ್ನಕ್ಕೆ ಸಂಚಕಾರ ಬಂದು) ನಮ್ಮ ಜೀವ ಸತ್ತು ಹೋಗುತ್ತದೆ ಎಂದು ಪಿತೂರಿ ಮಾಡಿದರು. ನಾವು ಯಾವಾಗಲೂ ನಿಮ್ಮ ಸಹಾಯಕ್ಕೆ ಕೂಡಿಕೊಂಡು ಇರುತ್ತೇವೆ ಅವರ ಜೊತೆ(ಆಯುಧಗಳನ್ನು ಕಸಿದುಕೊಳ್ಳಲು ಬಂದವರ ಜೊತೆ) ಜಗಳ ತೆಗೆಯಿರಿ ಎಂದು ಹಲಗಲಿಯ ಬೇಡರೆಲ್ಲ ಒಂದೆಡೆ ಸೇರಿಕೊಂಡು ಒಳಗಿಂದೊಳಗೆ ಮಾತು ಕೊಟ್ಟರು. ಆಯುಧಗಳನ್ನು ಕಸಿದುಕೊಳ್ಳಲು ಬಂದ ಗುಮಾಸ್ತನ ಕಪಾಳಕ್ಕೆ ಹೊಡೆದರು.ಇದಕ್ಕೆ ಪ್ರತಿರೋಧ ತೋರಿದ ಸಿಪಾಯಿಯನ್ನು ಸಾಯಿಸಿ ನೆಲಕ್ಕೆ ಬೀಳುವಂತೆ ಮಾಡಿದರು. ಈ ದುಃಖದ ಸುದ್ದಿ ತಕ್ಷಣ ಸಾಹೇಬನಿಗೆ (ಜೆ.ಬಿ. ಸೆಟೆನ್ಕರ್) ಮುಟ್ಟಿತು.

**ಸಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ**
**ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ**
**ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ**
**ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ**
**ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ**
**ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ ॥2॥**



**ಸಾರಾಂಶ:** ಈ ವಿಷಯವನ್ನು ತಿಳಿದು ಸಾಹೇಬ ಸಿಟ್ಟಿನಲ್ಲಿ ಕೈಗಳನ್ನು ಕಿವುಚಿಗೊಂಡು ಸೈನಿಕರಿಗೆ ಆದೇಶವನ್ನು ನೀಡಿದನು. ಆಗ ಅಶ್ವದಳ, ಕಾಲ್ದಳ ಸೇರಿಕೊಂಡು ಹಲಗಲಿಯ ನೆಲ(ಸ್ಥಳ)ವನ್ನು ಮಟ್ಟಿತು. ಇದನ್ನು ನೋಡಿದ ಹಲಗಲಿಯ ಜನ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಊರ ಒಳಗಿನಿಂದ ಗುಂಡುಗಳನ್ನು ಹೊಡೆದರು. ಇದರಿಂದ ಹೊರಗಿನ ಜನರಿಗೆ (ಬ್ರಿಟೀಷ್ ಸೈನಿಕರು)ಗುಂಡುಗಳು ಬಿದ್ದಾಗ ದಂಗು(ಹೆದರಿ) ಹಿಡಿದು ಹಿಂದೆ ಸರಿದು ನಿಂತರು. ಆಗ ಇನ್ನು ಹೆಚ್ಚಿನ ಸೈನ್ಯ ಬರಲಿ ಎಂದು ಸಾಹೇಬ (ಜೆ.ಬಿ. ಸೆಟೆನ್ಕರ್) ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ (ಹೆನ್ರಿ ಹ್ಯಾವ್‌ಲಾಕ್) ಕಳಿಸಿದನು. ಸೈನ್ಯ ತಯಾರಾಗಿ ತೀವ್ರವಾಗಿ (ವೇಗವಾಗಿ) ಹಲಗಲಿಗೆ ಬಂದಿತು.



**ಬೆನ್ನಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಂಗ**
**ನಡುವೆ ಹಾಕ್ಕೊಂಡು ಹೊಡದರೊ ಗುಂಡ ಕರುಣ ಇಲ್ಲದ್ಹಂಗ**
**ಚಟೆಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ**
**ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ**
**ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ**
**ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ ॥3॥**

**ಸಾರಾಂಶ :** ಅಲ್ಲಿಗೆ ಬಂದ ದಂಡು ಬೇಡರನ್ನು ಹಿಂದೆ ಹಿಂದೆ ಹೋಗಿ ತಿರುತಿರುವಿ ಹಾಕಿ ಏನು ಉಳಿಯದ ಹಾಗೆ ಕಡಿದು ಹಾಕಿದರು. ಬೇಡರನ್ನು ಮಧ್ಯಕ್ಕೆ ಹಾಕಿಕೊಂಡು ಕರುಣೆ ಇಲ್ಲದ ಹಾಗೆ (ಕರುಣೆ ತೋರದೆ) ಗುಂಡನ್ನು ಹೊಡೆದರು. ಚಟೆಕಾರರು (ಆಂಗ್ಲೋಇಂಡಿಯನ್ಸ್/ಭಾರತೀಯ ಬ್ರಿಟೀಷರು) ಬೇಡರನ್ನು ಕಾವಲು ಕಾಯುತ್ತ ಇರುವಾಗ ಬೇಡರು ಗುಡ್ಡದ ಕಡೆ ಹೋದರು. ಆಗ ಸಾಹೇಬ (ಹೆನ್ರಿ ಹ್ಯಾವ್‌ಲಾಕ್) ಊರಿನ ಹೆಬ್ಬಾಗಿಲಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಾನೆ, ಶರಣಾಗಲು ಒಪ್ಪಿಗೆ ನೀಡುತ್ತೇವೆ ಸತ್ತು ಹೋಗಬೇಡಿರಿ ಎನ್ನುವ ಮಾತಿನ ಮೇಲೆ ನಂಬಿಗೆ ಸಾಲದೆ ಹನುಮ ಮುಂದೆ ಬಂದು ನಿಂತನು.



**ಜಡಗ ಹೇಳುತಾನೊ ಹೊಡೆಯಿರಿ ಇವರ ಪೂರ ಘಾತಕರಾ**
**ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ**
**ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ**
**ಘೋರಾ ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ**

**'ಕಾರ' ಸಾಹೇಬ ಬೆಂಕಿ ಚೂರಾದ ಲೂಟಿ ಮಾಡಂತನೊ ಊರಾ**
**ಸಿಟ್ಟಿಲೆ ಹೊಡೆದರು ಸಿಡಿಲಸಿಡಿದ್ಹಾಂಗ ಗುಂಡು ಸುರಿದಾವ ಭರ್‌ಪೂರ**
**ಹನುಮ ಹೇಳತಾನ ಗುಂಡು ಹೊಡೆದಕೆರ ಕೆಡವುನಷ್ಟು ಬಾರ**
**ಮುನ್ನೂರ ಮಂದಿ ಮೈಮ್ಯಾಗ ಬಂದರ ಆಗ ನೋಡೊ ಜೋರಾ**



**ಭೀಮನು ಇದುರಿಗೆ ನಿಂತಾ ಐನೂರ್ಮಂದಿಗೆ ಮತ್ತಾ**
**ಬಾಲನು ಮಾಡಿದ ಕಸರತ್ತಾ. ಕುದುರಿಯ ಕಡಿದು ಹತ್ತಿಪ್ಪತ್ತಾ**
**ರಾಮನ ಕಡಿತ ವಿಪರೀತಾ. ಕಾಲುವೆ ಹರಿತೊ ರಕ್ತಾ**
**ಸಾವಿರ ಆಳಿಗೆ ಒಬ್ಬ ಕೂಗತಾನೊ, ಕಡಿಕಡಿರಿ ಅಂತ ಮತ್ತಾ**
**ನಾಲ್ಕು ಮಂದಿ ಹಿಂಗ ಕಡಿದು ಸತ್ತರೊ ಹಲಗಲಿ ಬಂಟರಣ್ಣ ಜನಕ ॥4॥**

**ಸಾರಾಂಶ:** ಜಡಗ ಹೇಳುತ್ತಾನೆ ಇವರನ್ನು ಹೊಡಿಯಿರಿ, ಇವರು ಸಂಪೂರ್ಣವಾಗಿ ಮೋಸಗಾರರು, ವಿಶ್ವಾಸವಂಚಕರು ಇವರ ಮೇಲೆ ನಂಬಿಗೆ ಇಲ್ಲ. ಒಳಸಂಚಿನಿಂದ ಮೋಸಮಾಡಿ ನಮ್ಮ ದೇಶ ಗೆಲ್ಲುತ್ತಾರೆ. ಮುಂದೆ ನಮಗೆ ಆಪತ್ತು ಕಾದಿದೆ ಎಂದು ಗುಂಡು ಹೊಡೆಯುತ್ತಾನೆ. ಆಗ ಹೆನ್ರಿ ಹ್ಯಾವ್‌ಲಾಕ್ ಸಾಹೇಬ ನಾಶವಾಗುತ್ತಾನೆ. (ಗುಂಡಿನ ದಾಳಿಗೆ ಸತ್ತು ಹೋಗುತ್ತಾನೆ) ಇದರಿಂದ ಕಾರ ಸಾಹೇಬ (ಅಲೆಗ್ಝಾಂಡರ್ ವಿಲಿಯಂ ಕೆರ್ರೆ ಎಂಬ ಬ್ರಿಟಿಷ್ ಅಧಿಕಾರಿ) ಸಿಟ್ಟಿಗೆದ್ದು ಊರನ್ನೆಲ್ಲಾ ಲೂಟಿ ಮಾಡಿರಿ ಎಂದು ಹೇಳುತ್ತಾನೆ. ಆಗ ಸೈನಿಕರು ಸಿಟ್ಟಿನಲ್ಲಿ ಸಿಡಿಲು ಸಿಡಿದ ಹಾಗೆ ಗುಂಡುಗಳನ್ನು ಹೊಡೆದರು, ಗುಂಡುಗಳು ಯಥೇಚ್ಛವಾಗಿ (ಪ್ರವಾಹದ ರೀತಿಯಲ್ಲಿ) ಸುರಿದವು. ಆಗ ಹನುಮ ಹೇಳುತ್ತಾನೆ ಗುಂಡು ಹೊಡೆದು ಕೆರ್ರ ಸಾಹೇಬನನ್ನು ಕೆಡವಿಹಾಕೋಣ ಬನ್ನಿರಿ ಎಂದು ಹೇಳಿದಾಗ ತಕ್ಷಣ ಮೂರು ನೂರು ಜನ ಸೈನಿಕರು ಹನುಮನ ಮೈಮೇಲೆ ಎರಗಿದರು. ಆಗ ಕದನ ಜೋರಾಯ್ತು. ಭೀಮನು ಎದುರಿಗೆ ನಿಂತ ಐದು ನೂರು ಮಂದಿಯನ್ನು, ಬಾಲನು ಚಮತ್ಕಾರ ಮಾಡಿ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದರು. ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆಯೇ ಹರಿಯಿತು. ಸಾವಿರ ಜನರಿಗೆ (ಹಲಗಲಿಯ ಜನರಿಗೆ) ಒಬ್ಬ ಕೂಗಿ ಹೇಳುತ್ತಾನೆ ಮತ್ತೆ ಮತ್ತೆ ಕಡಿದು ಹಾಕಿರೋ ಎಂದು. ಹೀಗೆ ನಾಲ್ಕು ಮಂದಿ ಕಡಿದು (ಬ್ರಿಟಿಷ್ ಸೈನ್ಯವನ್ನು ನಾಶಮಾಡಿ) ಸತ್ತು ಹೋದರು. ಇವರು ಹಲಗಲಿಯ ಜನಕ್ಕೆ ವೀರರು.



**ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ**
**ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ**
**ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ**
**ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ**
**ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ**
**ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು**
**ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು**
**ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ ॥5॥**

**ಸಾರಾಂಶ:** ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಸಿಣ, ಜೀರಗಿ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವಕಲ್ಲು – ಹೀಗೆ ಎಲ್ಲವನ್ನು ತೆಗೆದುಕೊಂಡು ಹೋಗಿದ್ದರಿಂದ ಹಾಳಾಗಿ ಹೋಯಿತು. ಇದನ್ನು ದುಃಖದಿಂದ ನಾನೆಷ್ಟು ವರ್ಣಿಸಿ ಹೇಳಲಿ, ಸಿಕ್ಕದೆಲ್ಲಾ ತಗೊಂಡು ಊರಿಗೆ ಬೆಂಕಿ ಇಟ್ಟು ಸುಟ್ಟು ದೂರ ನಿಂತರು. ಬೂದಿ ಮಾಡಿದರು. ಹಲಗಲಿಯ ಎಳ್ಳಷ್ಟು

(ಎಳ್ಳಕಾಳೊಷ್ಟು) ಗುರುತು ಉಳಿಯದೆ ಕಾಣದೆ ಹಾಳಾಗಿ ಹೋಯಿತು. ಇದನ್ನು ನಾನು ಕಂಡಷ್ಟು ವರ್ಣಿಸಿ ಹೇಳಿದೆ. ಕುರ್ತುಕೋಟಿಯ ಕಲ್ಮೇಶನ ದಯದಿಂದ ಹಾಡಿದೆನೋ ಅಣ್ಣಾ ಜನಕ್ಕೆ ತಿಳಿಸಲು.

## ಅಭ್ಯಾಸ ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?**

**ಉತ್ತರ:** ಕುಂಪಣಿ ಸರಕಾರ ನಿಶ್ಯಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು.

**2. ಹಲಗಲಿಯ ನಾಲ್ವರು ಪ್ರಮುಖರು ಯಾರು?**

**ಉತ್ತರ:** ಹಲಗಲಿಯ ನಾಲ್ವರು ಪ್ರಮುಖರು ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ.

**3. ಹಲಗಲಿ ಗುರುತು ಉಳಿಯದಂತಾದುದು ಏಕೆ?**

**ಉತ್ತರ:** ಕುಂಪಣಿ ಸರ್ಕಾರದ ದಂಡು ಹಲಗಲಿಗೆ ಬೆಂಕಿ ಹಚ್ಚಿ, ಸುಟ್ಟು ಬೂದಿ ಮಾಡಿದ್ದರಿಂದ ಗುರುತು ಉಳಿಯದಂತಾಯಿತು.

**4. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**

**ಉತ್ತರ:** ಹಲಗಲಿಯ ಬಂಟರ ಹತಾರ ಕದನದ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.

**5. ಹಲಗಲಿ ಗ್ರಾಮ ಎಲ್ಲಿದೆ?**

**ಉತ್ತರ:** ಹಲಗಲಿ ಗ್ರಾಮ ಅಂದು ಮುಧೋಳ ಸಂಸ್ಥಾನದಲ್ಲಿದ್ದು, ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

## ಹೆಚ್ಚುವರಿ ಪ್ರಶ್ನೋತ್ತರಗಳು

**6. ಒಳಗಿನ ಮಂದಿ ಗುಂಡನ್ನು ಹೇಗೆ ಹೊಡೆದರು?**

**ಉತ್ತರ:** ಒಳಗಿನ ಮಂದಿ ಮುಂಗಾರು ಸಿಡಿಲು ಸಿಡಿಯುವ ಹಾಗೆ ಗುಂಡನ್ನು ಹೊಡೆದರು.

**7. ಅಗಸಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿ ಮಾತು ಹೇಳಿದವರು ಯಾರು?**

**ಉತ್ತರ:** ಅಗಸಿಗೆ ಬಂದು ಹಲಗಲಿ ಬೇಡರಿಗೆ ಬುದ್ಧಿ ಮಾತು ಹೇಳಿದವರು ಹೆಬಲಕ ಸಾಬ.

**8. ಲಾವಣಿಕಾರ ಯಾರ ದಯದಿಂದ ಲಾವಣಿ ಹಾಡಿದೆನೆಂದು ಹೇಳಿದ್ದಾನೆ?**

**ಉತ್ತರ:** ಲಾವಣಿಕಾರ **ಕುರ್ತುಕೋಟಿ ಕಲ್ಮೇಶನ** ದಯದಿಂದ ಲಾವಣಿ ಹಾಡಿದೆನೆಂದು ಹೇಳಿದ್ದಾನೆ.

**9. ಕಂಪನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥೆಯನ್ನೊಳಗೊಂಡ ಲಾವಣಿ ಯಾವುದು?**

**ಉತ್ತರ:** ಕಂಪನಿ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿದ ಕಥೆಯನ್ನೊಳಗೊಂಡ ಲಾವಣಿ **ಹಲಗಲಿ ಬೇಡರ ಲಾವಣಿ.**

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

**ಉತ್ತರ:** ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು. ಈ ಆದೇಶದ ಪ್ರಕಾರ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಗೆ ಬಂದು ಜೋರ ಮಾಡಿ ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಹೋದರು. ಇದನ್ನು ವಿರೋಧಿಸಿ ರಾಮ, ಬಾಲ, ಹನುಮ, ಜಡಗ ಮೊದಲಾದ ಹಲಗಲಿ ಬೇಡರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದರು.

**2. ಹಲಗಲಿಗೆ ದಂಡು ಬರಲು ಕಾರಣವೇನು?**

**ಉತ್ತರ:** ಹಲಗಲಿಯ ಬೇಡರು ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದು ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಗುಂಡು ಹೊಡೆದರು. ಇದರಿಂದ ಬ್ರಿಟೀಷ್ ಸೈನಿಕರು ದಂಗು ಹಿಡಿದು ದೂರ ಸರಿದು ನಿಂತರು. ಆಗ ಇನ್ನು ಹೆಚ್ಚಿನ ದಂಡು ಬರಲಿ ಎಂದು ಸಾಹೇಬ (ಜೆ.ಬಿ.ಸೆಟೆನ್ಸರ್) ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳಿಸಿದನು. ಆಗ ದಂಡು ತಯಾರಾಗಿ ಹಲಗಲಿಗೆ ಬಂದಿತು.

**3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**

**ಉತ್ತರ:** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷ್‌ರ ದಂಡು ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಕ್ಕದ್ದನ್ನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿ ಮಾಡಿ ಹೋದರು.

**4. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?**

**ಉತ್ತರ:** ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ವೀರ ಕಲಿಗಳ ವೀರಸಾಹಸ, ವೀರರ ಉಜ್ವಲ ಜೀವನದ ಘಟನೆಗಳನ್ನಾಧರಿಸಿದ ಕಥನಾತ್ಮಕ ಕಾವ್ಯಗಳಾಗಿದ್ದು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನಲಾಗಿದೆ.

## ಹೆಚ್ಚುವರಿ ಪ್ರಶ್ನೋತ್ತರಗಳು

**5. ಹಲಗಲಿ ಏಕೆ ಹಾಳಾಗಿ ಹೋಯಿತು?**

**ಉತ್ತರ:** ಬ್ರಿಟೀಷರ ದಂಡು ಹಲಗಲಿಗೆ ಮುತ್ತಿಗೆ ಹಾಕಿ ಬೇಡರನ್ನು ಬಗ್ಗು ಬಡಿದು ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಸಿಣ, ಜೀರಗಿ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವಕಲ್ಲು – ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು, ಊರಿಗೆ ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿ ಗುರುತು ಉಳಿಯದಂತೆ ಮಾಡಿ ಹೋಗಿದ್ದರಿಂದ ಹಾಳಾಗಿ ಹೋಯಿತು.

**6. ಬ್ರಿಟೀಷರು ಹೊರಡಿಸಿದ ನಿಶ್ಯಸ್ತ್ರೀಕರಣದ ಆದೇಶ ವಿವರಣೆ ಏನು?**

**ಉತ್ತರ:** ಬ್ರಿಟೀಷರು ಹೊರಡಿಸಿದ ನಿಶ್ಯಸ್ತ್ರೀಕರಣದ ಆದೇಶ ವಿವರಣೆ ಏನೆಂದರೆ ಬ್ರಿಟೀಷ್ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು.

**7. ಹೆಬಲಕ ಸಾಹೇಬನ ಬುದ್ಧಿಮಾತಿಗೆ ವಿರೋಧವಾಗಿ ಜಡಗ ಏನು ಹೇಳುತ್ತಾನೆ?**

**ಉತ್ತರ:** ಹೆಬಲಕ ಸಾಹೇಬನ ಬುದ್ಧಿಮಾತಿಗೆ ವಿರೋಧವಾಗಿ ಜಡಗ ಇವರನ್ನು ಹೊಡಿಯಿರಿ, ಇವರು ಸಂಪೂರ್ಣವಾಗಿ ಮೋಸಗಾರರು, ವಿಶ್ವಾಸವಂಚಕರು ಇವರ ಮೇಲೆ ನಂಬಿಗೆ ಇಲ್ಲ. ಒಳಸಂಚಿನಿಂದ ಮೋಸಮಾಡಿ ನಮ್ಮ ದೇಶ ಗೆಲ್ಲುತ್ತಾರೆ. ಮುಂದೆ ನಮಗೆ ಆಪತ್ತು ಕಾದಿದೆ ಎಂದು ಹೇಳುತ್ತಾನೆ.

### ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

**1. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?**

**ಉತ್ತರ:** ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿತು. ಈ ಆದೇಶದ ಪ್ರಕಾರ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಗೆ ಬಂದು ಜೋರ ಮಾಡಿ ಬೇಡರ ಆಯುಧಗಳನ್ನು ಕಸಿದುಕೊಳ್ಳಲು ಹೋದರು. ಇದನ್ನು ವಿರೋಧಿಸಿ ರಾಮ, ಬಾಲ, ಹನುಮ, ಜಡಗ ಮೊದಲಾದ ಹಲಗಲಿ ಬೇಡರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದು ಒಳಗಿನಿಂದ ಮುಂಗಾರಿನ ಸಿಡಿಲು ಸಿಡಿಯುವ ಹಾಗೆ ಗುಂಡು ಹೊಡೆದರು. ಇದರಿಂದ ಬ್ರಿಟೀಷ್ ಸೈನಿಕರು ದಂಗು ಹಿಡಿದು ದೂರ ಸರಿದು ನಿಂತರು. ಆಗ ಇನ್ನು ಹೆಚ್ಚಿನ ದಂಡು ಬರಲಿ ಎಂದು ಸಾಹೇಬ (ಜೆ.ಬಿ.ಸೆಟೆನ್ಕರ್) ಪತ್ರ ಬರೆದು ತನ್ನ ಮೇಲಿನ ಅಧಿಕಾರಿಗೆ ಕಳಿಸಿದನು. ಆಗ ಬ್ರಿಟೀಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಸಿಡಿಲು ಸಿಡಿಯುವ ಹಾಗೆ ಸಿಟ್ಟಿಲೆ ಭರಪೂರವಾಗಿ ಗುಂಡನ್ನು ಸುರಿಸಿದರು. ಇದರಿಂದ ಹಲಗಲಿ ಬಂಟರು ಹೋರಾಡಿ ವೀರ ಮರಣವನ್ನಪ್ಪಿದರು. ಸಿಕ್ಕಿದ್ದನ್ನೆಲ್ಲ ತೆಗೆದುಕೊಂಡು ಊರಿಗೆ ಕೊಳ್ಳಿ ಇಟ್ಟು ಗುರುತು ಉಳಿಯದಂತೆ ಸುಟ್ಟು ಬೂದಿ ಮಾಡಿ ಹಲಗಲಿಯ ದಂಗೆಯನ್ನು ನಿಯಂತ್ರಿಸಿದರು.

**2. ಹಲಗಲಿ ದಂಗೆಯ ಪರಿಣಾಮವೇನು?**

**ಉತ್ತರ:** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷ್ ಸರ್ಕಾರದ ದಂಡು ತಯಾರಾಗಿ ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು ಸಾಯಿಸಿದರು. ಕೆಲವು ಬೇಡರು ತಪ್ಪಿಸಿಕೊಂಡು ಗುಡ್ಡದ ಕಡೆ ಓಡಿದರು. ಅಗಸಿಗೆ ಬಂದು ಬುದ್ಧಿ ಮಾತನ್ನು ಹೇಳುತ್ತಿದ್ದ ಹೆಬಲಕ ಸಾಹೇಬನನ್ನು ಜಡಗ ಗುಂಡು ಹೊಡೆದು ಕೊಂದು ಹಾಕಿದನು. ಇದರಿಂದ ಸಿಟ್ಟಿಗೆದ್ದ ಕಾರಸಾಹೇಬ ಊರನ್ನು ಲೂಟಿ ಮಾಡಲು ಆದೇಶಿಸಿದನು. ಬ್ರಿಟಿಷ್ ಸೈನಿಕರು ಸಿಡಿಲು ಸಿಡಿಯುವ ಹಾಗೆ ಸಿಟ್ಟಿಲೆ ಭರಪೂರವಾಗಿ ಗುಂಡನ್ನು ಸುರಿಸಿದರು. ಬಾಲನು ಕಸರತ್ತಿನಿಂದ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದನು. ರಾಮನ ವಿಪರೀತ ಕಡಿತದಿಂದ ರಕ್ತದ ಕಾಲುವೆ ಹರಿಯಿತು. ಹೀಗೆ ಹಲಗಲಿ ಬಂಟರಾದ ಪೂಜೇರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ, ಭೀಮ ಮೊದಲಾದ ಹೋರಾಡಿ ವೀರ ಮರಣವನ್ನಪ್ಪಿದರು. ಹಲಗಲಿಗೆ ಮುತ್ತಿಗೆ ಹಾಕಿ ಬೇಡರನ್ನು ಬಗ್ಗು ಬಡಿದ ಬ್ರಿಟಿಷ್ ದಂಡು ಕೊಡಲಿ, ಕುಡಗೋಲು, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಸಿಣ, ಜೀರಗಿ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ತಂಬಿಗೆ, ಮಂಗಳಸೂತ್ರ, ಬೀಸುವಕಲ್ಲು – ಹೀಗೆ ಸಿಕ್ಕಿದ್ದೆಲ್ಲಾ ತೆಗೆದುಕೊಂಡು, ಊರಿಗೆ ಕೊಳ್ಳಿ ಇಟ್ಟು ಸುಟ್ಟು ಬೂದಿ ಮಾಡಿ ಗುರುತು ಉಳಿಯದಂತೆ ಮಾಡಿ ಹೋಗಿದ್ದರಿಂದ ಹಾಳಾಗಿ ಹೋಯಿತು.

### ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

**1. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"**

**ಆಯ್ಕೆ :–** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಇದು ಕುಂಪಣಿ ಸರ್ಕಾರ ಹೊರಡಿಸಿದ ಆದೇಶದ ವಾಕ್ಯವಾಗಿದೆ. ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ವಿದೇಶದಿಂದ ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ **ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ** ಎಂಬ ಆದೇಶ ಹೊರಡಿಸಿತು. ಇದನ್ನು ವಿರೋಧಿಸಿ ಹಲಗರಹಳ್ಳಿ ಸುತ್ತಾ ಮುತ್ತಾ ಮೆರೆಯಿತು ಎಂದು ಲಾವಣಿಕಾರ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಭಾರತೀಯರನ್ನು ನಿಶ್ಯಸ್ತ್ರೀಕರಣಗೊಳಿಸಬೇಕೆಂಬ ಕುಂಪಣಿ ಸರ್ಕಾರದ ದರ್ಪ ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**2. "ಜೀವ ಸತ್ತು ಹೋಗುವುದು ಗೊತ್ತ"**

**ಆಯ್ಕೆ :–** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಇದು ಹಲಗಲಿ ಬೇಡರು ಹೇಳಿದ ಮಾತಾಗಿದೆ. ಕುಂಪಣಿ ಸರಕಾರ ನಿಶ್ಶಸ್ತ್ರೀಕರಣ ಕಾಯ್ದೆಯಡಿ ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ಎಂಬ ಆದೇಶ ಹೊರಡಿಸಿದಾಗ, ಹಲಗಲಿಯ ಪ್ರಮುಖರಾದ ಪೂಜಾರಿ ಹನುಮಾ, ಬ್ಯಾಡರ ಬಾಲ, ಜಡಗ, ರಾಮ ಎಂಬ ನಾಲ್ಕು ಮಂದಿ ಕೂಡಿಕೊಂಡು ನಾವು ನಮ್ಮ ಬಳಿಯಿರುವ ಆಯಧಗಳನ್ನು ಸತಾಯಿಸಿದರೂ ಕೊಡಬಾರದು. ಆಯುಧಗಳು ಹೋದರೆ **ನಮ್ಮ ಜೀವ ಸತ್ತು ಹೋಗುತ್ತದೆ** ಎಂದು ಪಿತೂರಿ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದವು, ಅವು ಹೋದರೆ ನಮ್ಮ ಪ್ರಾಣಕ್ಕೆ ಸಂಚಕಾರ ಎಂಬ ಭಾವನೆ ಹಲಗಲಿಯ ಬೇಡರ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಂತೆ ಇದೆ.

**3. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"**

**ಆಯ್ಕೆ :–** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಕುಂಪಣಿ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷ್‌ರ ದಂಡು ಹಲಗಲಿಗೆ ಬಂದಿತು. ಬ್ರಿಟಿಷ್ ದಂಡಿನ ಸಿಪಾಯಿಗಳು ಹಲಗಲಿಯ ಬೇಡರನ್ನು ಬೆನ್ನು ಬೆನ್ನು ಹತ್ತಿ ತಿರುತಿರವಿ ಹಾಕಿ ಕೊಂದರು. ಬೇಡರನ್ನು ದಂಡಿನ ಮಧ್ಯೆ ಹಾಕಿಕೊಂಡು **ಕರುಣೆ ಇಲ್ಲದೆ ಹಾಗೆ ಗುಂಡು ಹೊಡೆದು** ಸಾಯಿಸಿದರು ಎಂದು ಲಾವಣಿಕಾರ ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಹಲಗಲಿಯ ಬೇಡರ ಮೇಲೆ ಗುಂಡು ಹಾರಿಸಿ ಕೊಲ್ಲುವ ಬ್ರಿಟಿಷ್ ಸೈನಿಕರ ನಿಷ್ಕರುಣಾ ಭಾವ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿತವಾಗಿದೆ.

**4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"**

**ಆಯ್ಕೆ:–** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ಬ್ರಿಟಿಷ್‌ರ ಸೈನಿಕರು ಹಲಗಲಿಯನ್ನು ಲೂಟಿಮಾಡಿ ಊರಿಗೆ ಬೆಂಕಿ ಇಟ್ಟು ಸುಟ್ಟು ಬೂದಿ ಮಾಡಿದ್ದರಿಂದ ಹಲಗಲಿಯು ಎಳ್ಳಷ್ಟು ಗುರುತು ಉಳಿಯದೆ ಕಾಣದೆ ಹಾಳಾಗಿ ಹೋಯಿತು. ಇದನ್ನು ಕುರ್ತುಕೋಟಿಯ ಕಲ್ಮೇಶನ ದಯದಿಂದ **ನಾನು ಕಂಡೊಷ್ಟು ವರ್ಣಿಸಿ ಹೇಳಿದೆ** ಎಂದು ಲಾವಣಿಕಾರ ಹಾಡಿದ ಸಂದರ್ಭವಾಗಿದೆ.

**ಸ್ವಾರಸ್ಯ:–** ಹಲಗಲಿ ಬೇಡರು ಹೋರಾಡಿದ ವಿಚಾರವನ್ನು ಕಂಡಷ್ಟು ವರ್ಣಿಸಿದ್ದೇನೆ ಎಂದು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

**ಉ) ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ.**

1. ಹಲಗಲಿ ಬಂಟರ ಕದನ ವೀರರಸ ಪ್ರಧಾನವಾದ **ಲಾವಣಿ**
   (ಕತೆ, ಗಾದೆ, ಒಗಟು, ಲಾವಣಿ)
2. ಹಲಗಲಿಯು ಈಗ ಈ ಜಿಲ್ಲೆಗೆ ಸೇರಿದೆ **ಬಾಗಲಕೋಟೆ**
   (ಬಾಗಲಕೋಟೆ, ಕಲಾದಗಿ, ಮುಧೋಳ, ಹೆಬಲಕ)
3. ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ **ನಿಶ್ಶಸ್ತ್ರೀಕರಣ**
   (ಯುದ್ಧಶಾಸನ, ನಿಶ್ಶಸ್ತ್ರೀಕರಣ, ಕಬುಲಶಾಸನ, ಕುರ್ತಕೋಟಿಶಾಸನ)
4. ಲಾವಣಿಕಾರ ಅಂಕಿತಗೊಳಿಸಿರುವ ದೈವ **ಕಲ್ಮೇಶ**
   (ಕಲ್ಮೇಶ, ಹನುಮ, ರಾಮ, ಲಕ್ಷ್ಮೀಶ)
5. 'ವಿಲಾತಿ' ಪದದ ಸರಿಯಾದ ರೂಪ **ವಿಲಾಯಿತಿ**
   (ಆಯುಧ, ವಿಹಾರ, ವಿಲಂತಿ, ವಿಲಾಯಿತಿ)

## ಭಾಷಾ ಚಟುವಟಿಕೆ

**1. ಕೊಟ್ಟಿರುವ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**
ಮುಂಗೈ, ನಡುರಾತ್ರಿ, ಹನುಮಭೀಮರಾಮ, ಮೋಸಮಾಡು.

| | | | |
|---|---|---|---|
| **ಮುಂಗೈ** | = ಕೈಯ | + ಮುಂದು | – **ಅಂಶಿಸಮಾಸ** |
| **ನಡುರಾತ್ರಿ** | = ರಾತ್ರಿಯ | + ನಡು | – **ಅಂಶಿಸಮಾಸ** |
| **ಹನುಮಭೀಮರಾಮ** | = ಹನುಮನೂ | + ಭೀಮನೂ + ರಾಮನೂ | – **ದ್ವಂದ್ವಸಮಾಸ** |
| **ಮೋಸಮಾಡು** | = ಮೋಸವನ್ನು | + ಮಾಡು | – **ಕ್ರಿಯಾಸಮಾಸ** |

2. **ಕೊಟ್ಟಿರುವ ಗ್ರಾಮ್ಯ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.**
ಹೀಂಗ, ಮ್ಯಾಗ, ಕಳುವ್ಯಾರೆ, ಇಲ್ಲದ್ಹಂಗ, ಇಸವಾಸ, ಸಕ್ಕಾರಿ.

| | | | | |
|---|---|---|---|---|
| ಹೀಂಗ | **ಹೀಗೆ** | | ಇಲ್ಲದ್ಹಂಗ | **ಇಲ್ಲದಹಾಗೆ** |
| ಮ್ಯಾಗ | **ಮೇಲೆ** | | ಇಸವಾಸ | **ವಿಶ್ವಾಸ** |
| ಕಳುವ್ಯಾರೆ | **ಕಳುಹಿಸಿದ್ದಾರೆ** | | ಸಕ್ಕಾರಿ | **ಸಕ್ಕರೆ** |

3. **ಅಲಂಕಾರವನ್ನು ಹೆಸರಿಸಿ ಸಮನ್ವಯಿಸಿ.**

**ಅ) ಒಳಗಿನ ಮಂದಿ ಗುಂಡು ಹೊಡಿದರೂ ಮುಂಗಾರಿ ಸಿಡಿಲ ಸಿಡಿದ್ಹಾಂಗ**

**ಅಲಂಕಾರ** : ಉಪಮಾಲಂಕಾರ (ಧರ್ಮಲುಪ್ತೋಪಮಾಲಂಕಾರ)
**ಉಪಮೇಯ** : ಒಳಗಿನ ಮಂದಿ ಗುಂಡು ಹೊಡೆಯುವುದು
**ಉಪಮಾನ** : ಮುಂಗಾರಿನ ಸಿಡಿಲು ಸಿಡಿಯುವುದು
**ಉಪಮಾ ವಾಚಕ** : ಹಾಂಗ
**ಸಮಾನ ಧರ್ಮ** : ಸಿಡಿಯುವುದು
**ಸಮನ್ವಯ** : ಇಲ್ಲಿ ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.
**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಆ) ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ**

**ಅಲಂಕಾರ** : ಉಪಮಾಲಂಕಾರ (ಧರ್ಮಲುಪ್ತೋಪಮಾಲಂಕಾರ)
**ಉಪಮೇಯ** : ಗುಂಡು ಸುರಿಯುವುದು
**ಉಪಮಾನ** : ಸಿಡಿಲು ಸಿಡಿಯುವುದು
**ಉಪಮಾ ವಾಚಕ** : ಹಾಂಗ
**ಸಮಾನ ಧರ್ಮ** : ಸುರಿಯುವುದು, ತೀವ್ರತೆ.
**ಸಮನ್ವಯ** : ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.
**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

4. **ಸ್ವಂತ ವಾಕ್ಯದಲ್ಲಿ ಬಳಸಿ.**
ಒಳಗಿಂದೊಳಗೆ, ಸುದ್ದಿ, ಮಂದಿ, ಕಸರತ್ತು.

**ಒಳಗಿಂದೊಳಗೆ** : ಹಲಗಲಿಯ ಬೇಡರೆಲ್ಲ ಒಂದೆಡೆ ಸೇರಿಕೊಂಡು ಒಳಗಿಂದೊಳಗೆ ಮಾತು ಕೊಟ್ಟರು.
**ಸುದ್ದಿ** : ಕಾರಕೂನನ ಕಪಾಳ ಹೊಡೆದು, ಸಿಪಾಯಿಯನ್ನು ಸಾಯಿಸಿ ನೆಲಕ್ಕೆ ಬೀಳುವಂತೆ ಮಾಡಿದ ದುಃಖದ ಸುದ್ದಿ ಸಾಹೇಬನಿಗೆ ಮುಟ್ಟಿತು.
**ಮಂದಿ** : ಒಳಗಿನ ಮಂದಿ ಮುಂಗಾರು ಸಿಡಿಲ ಸಿಡಿದ್ಹಾಂಗ ಗುಂಡು ಹೊಡೆದರು.
**ಕಸರತ್ತು** : ಬಾಲನು ಕಸರತ್ತು ಮಾಡಿ ಹತ್ತಿಪ್ಪತ್ತು ಕುದುರೆಗಳನ್ನು ಕಡಿದು ಹಾಕಿದರು.

5. **ದೇಶ್ಯ-ಅನ್ಯದೇಶ್ಯ ಪದಗಳನ್ನು ಆರಿಸಿ ಬರೆಯಿರಿ.**
ಹೊತ್ತು, ಹತಾರ, ಮಸಲತ್ತ, ಬಂಟರು, ಹುಕುಮ, ಮುಂಗೈ, ಸಾಹೇಬ, ಕಾರಕೂನ, ಸಿಪಾಯಿ, ಮುಂಗಾರು, ಕಬುಲ.

| | |
|---|---|
| **ದೇಶಿಯ ಪದಗಳು** | ಹೊತ್ತು, ಬಂಟರು, ಮುಂಗೈ, ಮುಂಗಾರು. |
| **ಅನ್ಯದೇಶಿಯ ಪದಗಳು** | ಹತಾರ, ಮಸಲತ್ತ, ಹುಕುಮ, ಸಾಹೇಬ, ಕಾರಕೂನ, ಸಿಪಾಯಿ, ಕಬುಲ. |

## ಭಾಷಾ ಚಟುವಟಿಕೆ

1. **ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ, ಕಂಠಪಾಠ ಮಾಡಿರಿ.**

| | |
|---|---|
| ಕೊಡಲಿ **ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ** ಹಾಲಾ | ಸಿಕ್ಕದ್ದು ತಗೊಂಡು **ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ** |
| **ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ** | **ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು** |
| **ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ** | **ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು** |
| **ಹಾಳಾಗಿ ಹೋಯಿತು ಅತ್ತು ವರ್ಣಿಸಿ** ಹೇಳಲಿ ನಾನೆಷ್ಟಾ | **ಕುರ್ತಕೋಟಿ ಕಲ್ಮೇಶನ ದಯದಿಂದ** ಹಾಡಿದೆನಣ್ಣಾ ಜನಕಾ |